ಶ್ರೀ ಬಿ.ಎಲ್. ಗೌಡ.—ಈಗಾಗಲೇ ಹುಬ್ಬಳ್ಳಿಯಲ್ಲಿ ಐದು ನೂರು ಮೆಟ್ರಿಕ್ ಟನ್, ಹಾವೇರಿಯಲ್ಲಿ ಆರು ನೂರು ಮೆಟ್ರಿಕ್ ಟನ್ ಗೊಬ್ಬರ ದಾಸ್ತಾನು ಇರುವುದರಿಂದ ಇದರ ಕೊರತೆ ಇಲ್ಲ. ಸಹಕಾರ ಸಂಘಗಳ ಮೂಲಕ ಸರಬರಾಜು ಮಾಡಲು ಕೂಡ ಸಾಕಷ್ಟು ಗೊಬ್ಬರದ ದಾಸ್ತಾನು ಇದೆ.

ಗಮನ ಸೆಳೆಯುವ ಸೂಚನೆ

ಸೀಮೆಯಣ್ಣೆಯ ಅಭಾವದಿಂದ ಸಾರ್ವಜನಿಕರಿಗೆ ಉಂಟಾದ ತೊಂದರೆಯ ಬಗ್ಗೆ

ಶ್ರೀ ಪಿ. ರಾಮ್‌ದೇವ್.—ಮಾನ್ಯ ಅಧ್ಯಕ್ಷರೇ, ಸೀಮೆಯೆಣ್ಣೆ ಅಭಾವದಿಂದ ಸಾರ್ವಜನಿಕರಿಗೆ ಉಂಟಾದ ತೊಂದರೆಯ ವಿಚಾರವನ್ನು ಮಾನ್ಯ ಆಹಾರ ಹಾಗೂ ನಾಗರಿಕ ಪೂರೈಕೆ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾವು ನಮಗೆ ಬೇಕಾದ ಸೀಮೆಎಣ್ಣೆಗೆ ಭಾರತ ಸರ್ಕಾರದ ಮೇಲೆ ಪೂರ್ತ ಹೊಂದಿಕೊಂಡಿದ್ದೇವೆ. ಭಾರತ ಸರ್ಕಾರವು ಆಗಸ್ಟ್ ತಿಂಗಳಿಗೆ ೨೩,೭೦೦ ಟನ್ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಿತು. ಮಳೆಗಾಲದಲ್ಲಿ ಸೀಮೆಎಣ್ಣೆ ಬೇಡಿಕೆ ಹೆಚ್ಚಾಗಿರುವುದು ನಮ್ಮ ಅನುಭವಕ್ಕೆ ಬಂದಿದೆ. ಇದಕ್ಕೋಸ್ಕರ ನಾವು ಭಾರತ ಸರ್ಕಾರವನ್ನು ಹೆಚ್ಚು ಸೀಮೆಎಣ್ಣೆ ಒದಗಿಸಲು ಕೇಳಿದ್ದೇವೆ. ಸೀಮೆಎಣ್ಣೆಯು ನಮ್ಮಲ್ಲಿರುವ ಬೇಡಿಕೆಗೆ ಬೇಕಾದಷ್ಟು ಇಲ್ಲ. ಇದಕ್ಕೋಸ್ಕರ, ಆಗಸ್ಟ್ ತಿಂಗಳ ಕೊನೆಯ ವಾರ ಸೀಮೆಎಣ್ಣೆಯ ಅಭಾವ ಕಂಡುಬಂದಿತು.

೧೯೫೩ನೇ ಸೆಪ್ಟೆಂಬರ್ ತಿಂಗಳಿಗೆ, ಭಾರತ ಸರ್ಕಾರದವರು ನಮಗೆ ೨೩,೭೦೦ ಟನ್ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಿದ್ದಾರೆ. ಇದು ಮಳೆಗಾಲವಾದ್ದರಿಂದ, ಈ ಸೀಮೆಎಣ್ಣೆ ಸಾಕಾಗುವುದಿಲ್ಲ. ಆದ್ದರಿಂದ ನಾವು ಭಾರತ ಸರ್ಕಾರವನ್ನು ಇನ್ನೂ ೧,೦೦೦ ಟನ್ ಸೀಮೆಎಣ್ಣೆಯನ್ನು ಹೆಚ್ಚಾಗಿ ಕೊಡಲು ಕೇಳಿಕೊಂಡಿದ್ದೇವೆ.

ಸೀಮೆಎಣ್ಣೆ ಸರಬರಾಜಿನಲ್ಲಿ ಸ್ವಲ್ಪ ಖೋತಾ ಇರುವುದರಿಂದ, ಜನರಲ್ಲಿ ಶೇಖರಿಸುವ ಮತ್ತು ಕಾಳಸಂತೆಯಲ್ಲಿ ಮಾರುವುದು ನಮ್ಮ ಅನುಭವಕ್ಕೆ ಬಂದಿದೆ. ನಾವು ಕಾಳಸಂತೆಯನ್ನು ನಿಲ್ಲಿಸಿ, ಮತ್ತು ಸೀಮೆಎಣ್ಣೆಯು ಈ ಹಬ್ಬದ ಸಾಲಿನಲ್ಲಿ ಎಲ್ಲರಿಗೂ ಸಿಗುವಂತೆ ಮಾಡಲು ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ. ಈ ಅಭಿಪ್ರಾಯದಿಂದ ನಾವು ಈ ದಿನದಿಂದಲೇ ಸೀಮೆಎಣ್ಣೆಯನ್ನು ನ್ಯಾಯ ಬೆಲೆ ಅಂಗಡಿಗಳ ಮುಂದೆ ಪಡಿತರ ಚೀಟಿಗಳ ಮೂಲಕ ಹಂಚಲು ವ್ಯವಸ್ಥೆ ಮಾಡುತ್ತೇವೆ. ಈ ಪದ್ಧತಿಯಿಂದ ಜನರಿಗೆ ಸ್ವಲ್ಪ ತೊಂದರೆ ಆದರೂ ಆಗಬಹುದು. ನಾನು ಈ ಸದನದ ಮೂಲಕ ಬಳಕೆದಾರರನ್ನು ಸ್ವಲ್ಪ ತೊಂದರೆ ಆದರೂ ಕೂಡ ಅದನ್ನು ಪರಿಗಣಿಸದೆ ಸಹಕರಿಸಬೇಕೆಂದು ಕೋರುತ್ತೇನೆ. ಈ ಪದ್ಧತಿಯಿಂದ ಮಾತ್ರ ನಾವು ಕಾಳಸಂತೆಯನ್ನು ನಿಲ್ಲಿಸ ಬಹುದು.

ಶ್ರೀ ಪಿ. ರಾಮದೇವ್.—ಸ್ವಾಮಿ, ಇದು ಸತತವಾಗಿ ಕಳೆದ ಐದಾರು ವರ್ಷಗಳಿಂದ ಕೇಳುತ್ತಿರುವ ಮಾಮೂಲಿ ಉತ್ತರವಾಗಿದೆ. ಒಂದು ಕೃತಕವಾದ ಅಭಾವವನ್ನು.....

ಅಧ್ಯಕ್ಷರು:—ಈಗ ನೀವು ಆ ಕಡೆ ಕುಳಿತುಕೊಂಡು ಈ ಮಾತನ್ನು ಹೇಳುತ್ತಿರುವುದನ್ನು ಗಮನಿಸಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರ ಕೊಡುವಾಗ ಜನರು ತೊಂದರೆಯಾದರೂ ಕೂಡ ಸಹಕರಿಸಬೇಕೆಂದು ಕೇಳಿಕೊಂಡಿದ್ದಾರೆ. ಹಾಗೆಂದರೆ ಸೀಮೆಎಣ್ಣೆ ಸಿಗದಿದ್ದರೂ ಸಹಿಸಿಕೊಳ್ಳಬೇಕೆಂದು ಅರ್ಥವೋ?

ಶ್ರೀ ವಿ. ಧನಂಜಯಕುಮಾರ್.—ಕಳೆದ ನಾಲ್ಕಾರು ವರ್ಷಗಳಿಂದಲೂ ಇದೇ ಉತ್ತರವನ್ನು ಕೇಳುತ್ತಿದ್ದೇವೆ ಎಂದು ಅವರು ಹೇಳುತ್ತಿರುವುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಾಮ್‌ದೇವ್ ಅವರು ಈಗಲೂ ಕೂಡ ಕೃತಕ ಅಭಾವ ಇದೆಯೆಂದು ಹೇಳಿದ್ದನ್ನು ಕೇಳಿ ನನಗೆ ಸಂತೋಷವಾಯಿತು.

ಶ್ರೀ ಪಿ. ರಾಮ್‌ದೇವ್.—ಕೆಲವೊಮ್ಮೆ ನಾವು ಪಕ್ಷಾತೀತವಾಗಿ ಮಾತನಾಡಬೇಕಾಗುತ್ತದೆ, ಸತ್ಯಾಂಶಗಳನ್ನು ಹೇಳಬೇಕಾಗುತ್ತದೆ, ಜನರಿಗೆ ತೊಂದರೆ ಇದ್ದಾಗ ಗುಟ್ಟುಗುಟ್ಟಾಗಿ ಮಾಡುವ ಪ್ರವೃತ್ತಿಯಿಂದ ಒಳ್ಳೆಯದೇನೂ ಆಗುವುದಿಲ್ಲ,

ಅಧ್ಯಕ್ಷರು.—ರಾಮ್‌ದೇವ್ ಅವರೇ ನೀವು ಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳಿ.

ಶ್ರೀ ಪಿ. ರಾಮ್‌ದೇವ್.—ಈ ಕೃತಕ ಅಭಾವವನ್ನು ಇವತ್ತು ಅಧಿಕಾರಿಗಳು ಮತ್ತು ಸಗಟು ವ್ಯಾಪಾರಿಗಳು ಒಟ್ಟಾಗಿ ಸೇರಿ ಸೃಷ್ಟಿ ಮಾಡುತ್ತಿದ್ದಾರೆ, ಹಿಂದೆ ಬರುತ್ತಿದ್ದ ೨೩,೭೦೦ ಟನ್ ಸೀಮೆಎಣ್ಣೆ ಈಗಲೂ ಬರುತ್ತಿರುವಾಗ, ಹಿಂದೆ ಇಲ್ಲದಿದ್ದ ಅಭಾವ ಈಗ ಏಕೆ ಬಂತು? ಜನರು ಇದನ್ನು ಸಂಗ್ರಹ ಮಾಡಿಟ್ಟು ಕೊಳ್ಳುತ್ತಾರೆ ಎನ್ನುವುದು ಒಪ್ಪತಕ್ಕದ್ದಲ್ಲ, ಜನರ ಹತ್ತಿರ ದುಡ್ಡಿಲ್ಲ ಮತ್ತು ಅಂತಹ ದೊಡ್ಡ ಡಬ್ಬಗಳು ಸಿಟಿಯಲ್ಲಿ ಸಿಗುತ್ತಲೂ ಇಲ್ಲ, ಇದರಲ್ಲಿ ಕಾಳಸಂತೆ ವ್ಯವಹಾರಗಳೇ ನಡೆಯುತ್ತವೆ, ಕೃತಕ ಅಭಾವವನ್ನು ಸೃಷ್ಟಿ ಮಾಡಿದರೆ ದುಡ್ಡು ಮಾಡಿಕೊಳ್ಳಬಹುದೆಂದು ಏನು ಈ ರಾಕೆಟ್ ಇದೆ, ಇದನ್ನು ತಪ್ಪಿಸಲು ಸರ್ಕಾರ ಏಕೆ ಕ್ರಮ ವನ್ನು ತೆಗೆದುಕೊಂಡಿಲ್ಲ?

ಈ ರೀತಿ ದೊಡ್ಡ ರಾಕೇಟ್ ಇದರಲ್ಲಿ ಇದೆ. ಅದರಲ್ಲಿ ಯಾರ್ಯಾರು ಇದ್ದಾರೆ ಮತ್ತು ಇದನ್ನು ಡೀಲ್ ಮಾಡತಕ್ಕಂತಹ ಹೋಲ್‌ಸೆಲ್ಲರ್ಸ್ ಯಾರು? ಕೃಗಾಡಿಯವರೆ ಮೇಲೆ ಹೇಳಿಬಿಟ್ಟರೆ ಕೈಗಾಡಿಯವರು ಆ ರೀತಿ ಕಾಳಸಂತೆಯನ್ನು ಮಾಡುತ್ತಿಲ್ಲ. ಇದರಲ್ಲಿ ಯಾರು ಹೋಲ್‌ಸೆಲ್ಲರ್ಸ್ ಇದ್ದಾರೋ ಅವರು ಕಾಳಸಂತೆಯನ್ನು ಮಾಡುವವರು. ಕೈಗಾಡಿಯವರು ದಿನಗೂಲಿಯ ಮೇಲೆ ಕೆಲಸ ಮಾಡ ತಕ್ಕಂತವರು ಮತ್ತು ಸಣ್ಣ ಪುಟ್ಟ ಜನ. ಇದರ ಹಿಂದೆ ಹೋಲ್‌ಸೆಲ್ಲರ್ಸ್‌ನವರ ಕೈವಾಡ ಇದೆ. ಅಂತಹ ಎಷ್ಟು ಜನರ ಮೇಲೆ ರೈಡ್ ಮಾಡಿದ್ದೀರಿ? ಅವರ ದಾಸ್ತಾನು ಗೋಳಿಯ ಮೇಲೆ ರೈಡ್ ಮಾಡಿ ಎಷ್ಟು ಜನರನ್ನು ಪ್ರಾಸಿಕ್ಯೂಟ್ ಮಾಡಿದ್ದೀರಾ ? ಮೂರನೆಯದಾಗಿ ಇವತ್ತು ಒಂದು ಲೀಟರ್ ಸೀಮೆ ಎಣ್ಣೆಗೆ ೫ ರೂಪಾಯಿಯಂತೆ ವ್ಯಾಪಾರ ಮಾಡುತ್ತಿದ್ದಾರೆ. ಅದು ಪತ್ರಿಕೆಯಲ್ಲೂ ಬಂದಿದೆ. ಪತ್ರಿಕೆಯ ಮುಖಾಂತರ ಸರ್ಕಾರದ ಗಮನಕ್ಕೂ ಬಂದಿದೆ. ನಾವು ಕೂಡ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಇವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇಂತಹವರನ್ನು ಹಿಡಿಯುವುದಕ್ಕಾಗಿ ಆಹಾರ ಇಲಾಖೆ ಇಲ್ಲವೆ, ಇಲ್ಲ ವಿಜಿಲೆನ್ಸ್ ಇಲಾಖೆ ಇಲ್ಲವೇ ? ಒಂದು ವೇಳೆ ಸರ್ಕಾರದ ಕೈಯಲ್ಲಿ ಅಂತಹವರನ್ನು ಹಿಡಿಯುವುದಕ್ಕೆ ಆಗದಿದ್ದರೆ ಜನಗಳಿಗೆ ಬಿಟ್ಟು ಬಿಡಿ. ಆದರೆ ಸರ್ಕಾರ ಜೀವಂತವಾಗಿದೆ. ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ? ಪದೇ ಪದೇ ಕೇಂದ್ರದಿಂದ ನಮಗೆ ಬರಬೇಕಾದಷ್ಟು ಪ್ರಮಾಣದಲ್ಲಿ ಸರಬರಾಜು ಬರಲಿಲ್ಲ ಅಂತ ಹೇಳುತ್ತಲೇ ಇದ್ದೀರಿ. ತಾವು ಏನು ಈ ಬಗ್ಗೆ ಪ್ರಯತ್ನ ಮಾಡಿದ್ದೀರಿ ? ಕೇಂದ್ರದವರು ಪಕ್ಕದ ರಾಜ್ಯಗಳಾದ ಕೇರಳಕ್ಕೆ ಯಾವ ರೀತಿ ಸರಬರಾಜು ಮಾಡುತ್ತಿದ್ದಾರೆ ? ಇದರ ಬಗ್ಗೆ ತಮ್ಮ ಪ್ರಯತ್ನ ಏನು ಎಂಬುದನ್ನು ಸ್ವಲ್ಪ ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.—ನಮಗೆ ಒಟ್ಟು ಬೇಕಾಗಿರುವುದು ೨೩,೭೦೦ ಮೆಟ್ರಿಕ್ ಟನ್ ಸೀಮೆ ಎಣ್ಣೆ, ಆದರೆ ಕೇಂದ್ರದಿಂದ ೨೩,೭೦೦ ಮೆಟ್ರಿಕ್ ಟನ್ ಸೀಮೆ ಎಣ್ಣೆ ಬರುತ್ತಾ ಇದೆ. ಆದರೂ ನಮ್ಮಲ್ಲಿ ದಿನೇ ದಿನೇ ಇದರ ಬೇಡಿಕೆ ಜಾಸ್ತಿಯಾಗಿದೆ. ಇದಕ್ಕೆ ಕಾರಣವೇನೆಂದರೆ, ಸೌದೆಯನ್ನು ಉಪಯೋಗಿಸ ತಕ್ಕಂತಹ ಗ್ರಾಹಕರೂ ಸಹ ಸೌದೆ ಬೆಲೆ ಏರಿರುವುದರಿಂದ ಮತ್ತು ಅದರಿಂದ ಇತರೆ ತೊಂದರೆಗಳಿರು ವುದರಿಂದ ಸೀಮೆ ಎಣ್ಣೆಯನ್ನು ಬಳಸುವುದಕ್ಕೆ ಪರಿವರ್ತನೆಗೊಂಡಿದ್ದಾರೆ. ಎರಡನೆಯದಾಗಿ ಅಡಿಗೆ ಎಣ್ಣೆ ಕೂಡ ಸರಿಯಾದ ಪ್ರಮಾಣದಲ್ಲಿ ಸರಬರಾಜಾಗುತ್ತಿಲ್ಲವಾದ್ದರಿಂದ ಆ ಜನರೂ ಕೂಡ ಸೀಮೆ ಎಣ್ಣೆಯನ್ನು ಬಳಸುವುದಕ್ಕೆ ಪರಿವರ್ತನೆಗೊಂಡಿದ್ದಾರೆ. ಮೂರನೆಯದಾಗಿ, ವಿದ್ಯುಚ್ಛಕ್ತಿ ಕಡಿತ ದಿಂದ ಹೆಚ್ಚಿನ ಜನರು ಸೀಮೆ ಎಣ್ಣೆಯನ್ನು ಉಪಯೋಗ ಮಾಡುವುದಕ್ಕೆ ಪರಿವರ್ತನೆಗೊಂಡಿದ್ದಾರೆ. ೨೩,೭೦೦ ಮೆಟ್ರಿಕ್ ಟನ್ ಸೀಮೆ ಎಣ್ಣೆ ಹಿಂದೆಯೂ ಕೇಂದ್ರದಿಂದ ಬರುತ್ತಿತ್ತು. ಈಗಲೂ ಅಷ್ಟೇ ಬರುತ್ತಾ ಇದೆ. ಹಿಂದೆ ಅಭಾವ ಇರಲಿಲ್ಲ. ಈಗ ನಾನು ಮೇಲೆ ಹೇಳಿದ ಕಾರಣಗಳಿಂದ ಅಭಾವ ಇದೆ ಪ್ರತಿಯೊಬ್ಬ ಬಳಕೆದಾರನೂ ಸೀಮೆ ಎಣ್ಣೆಯನ್ನು ಅಡಿಗೆಗೆ ಉಪಯೋಗಿಸುವುದು ಜಾಸ್ತಿಯಾಗಿದೆ. ಈ ಕಾರಣದಿಂದ ಕೃತಕ ಅಭಾವ ಇದೆ. ಶ್ರೀಮಾನ್ ಶ್ರೀ ರಾಮದೇವ್ ರವರು ಎಷ್ಟು ಜನ ಡೀಲರ್ಸ್ ಮೇಲೆ ಕ್ರಮ ಕೈಗೊಂಡಿದ್ದೀರಿ ಎಂಬುದಾಗಿ ಕೇಳಿದ್ದಾರೆ ೫ ಜನ ಹಾಕ್ಸ್ ರವರ ಲೈಸನ್ಸ್‌ನ್ನು

ರದ್ದು ಮಾಡಿದ್ದೇವೆ. ಹೋಲ್‌ಸೇಲ್ ಡೀಲರ್ಸ್ ಏನು ಇದ್ದಾರೆ ಅವರ ದೇಲೆ ನಮ್ಮ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ನಿರ್ದೇಶಕರು ರೈಡ್ ಮಾಡಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಕಳೆದ ಒಂದು ವಾರದಿಂದ ಈ ರೀತಿಯ ಅಭಾವ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ಯಾರ್ಯಾರ ಮೇಲೆ ಕ್ರಮ ತೆಗೆದು ಕೊಂಡಿದ್ದಾರೆಂಬುದನ್ನು ದಯಮಾಡಿ ಹೇಳಬೇಕು.

ಅಧ್ಯಕ್ಷರು—ಇದು ಗಮನ ಸೆಳೆಯುವ ಸೂಚನೆ. ಚರ್ಚೆಗೆ ಅಷ್ಟೊಂದು ಅವಕಾಶ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳು ಹೇಳುತ್ತಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಯಾರ್ಯಾರು ಅಂತ ಹೇಳಿದರೆ ಅನುಕೂಲ.

ಶ್ರೀ ಜಿ. ಬಸವಣ್ಣಪ್ಪ.—ಈ ವಿಚಾರ ನಮ್ಮ ಗಮನಕ್ಕೆ ಬಂದ ತಕ್ಷಣ ವಿಚಕ್ಷಣೆಯಿಂದ ಅಧಿಕಾರಿಗಳ ಸಭೆಯನ್ನು ಮತ್ತು ರೇಂಜ್ ಆಫೀಸರುಗಳ ಸಭೆಯನ್ನು ಕರೆದು ಅದರಲ್ಲಿ ಚರ್ಚೆ ಮಾಡಿ ಈಗಾಗಲೇ ತಕ್ಕ ಕ್ರಮವನ್ನು ನಾವು ತೆಗದುಕೊಂಡಿದ್ದೇವೆ. ಹಾಕರ್ಸ್ ಏನು ಇದ್ದಾರೆ, ಅವರು ನ್ಯಾಯ ಬೆಲೆ ಅಂಗಡಿಯ ಮುಂದೆಯೇ ಬೋರ್ಡ ಹೋಲ್ಡರ್ಸ್ ಯಾರು ಇದ್ದಾರೆ, ಅವರಿಗೆ ಎಷ್ಟು ನಿಗದಿ ಮಾಡಿದ್ದಾರೆ ಅಷ್ಟೇ ಕೊಡಬೇಕೆಂದು ವಿತರಣೆ ಮಾಡತಕ್ಕ ತಂಹ ಪದ್ಧತಿಯನ್ನು ಬದಲಾವಣೆ ಮಾಡಿದ್ದೇವೆ, ಇವತ್ತಿನಿಂದ ಆ ಕಾರ್ಯಕ್ರಮ ಜಾರಿಗೆ ಬರುತ್ತದೆ, ಇನ್ನು ಮುಂದೆ ಆ ರೀತಿ ಆಗುವುದಿಲ್ಲ,

ಶ್ರೀ ಎಸ್. ಸೂರ್ಯನಾರಾಯಣರಾವ್,—ಆ ಹೋಲ್‌ಸೇಲ್ ಡೀಲರ್ಸ್ ಯಾರು ಎಂಬುದು ಜನಗಳಿಗೆ ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು,—ಮಾನ್ಯ ಸದಸ್ಯರಾದ ಶ್ರಿಮಾನ್ ರಾಮದೇವ್‌ರವರು ಕೇಂದ್ರದಿಂದ ಹೆಚ್ಚು ಎಣ್ಣೆಯನ್ನು ತರಿಸುವುದಕ್ಕೆ ನಿಮ್ಮ ಪ್ರಯತ್ನ ಏನು ಎಂಬುದಾಗಿ ಕೇಳಿದ್ದಾರೆ, ಅದರ ಬಗ್ಗೆ ಹೇಳಿ,

ಶ್ರೀ ಜಿ. ಬಸವಣ್ಣಪ್ಪ,—ಕೇಂದ್ರ ಸರ್ಕಾರಕ್ಕೆ ನಾವು ಅನೇಕ ಸಾರಿ ಹೇಳಿದ್ದೇವೆ, ನಾನೂ ಕೂಡ ಒಂದೆರಡು ಸಲ ಕೇಂದ್ರದ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದರಿಂದ ೩೦೦ ಮೆಟ್ರಿಕ್ ಟನ್ ಜಾಸ್ತಿ ಕೊಟ್ಟಿದ್ದಾರೆ, ಇನ್ನೂ ೨ ಸಾವಿರ ಟನ್ ಜಾಸ್ತಿ ಕೊಡಿ ಎಂಬುದಾಗಿ ಎರಡು ಮೂರು ಕಾಗದಗಳನ್ನು ಬರೆದಿದ್ದೇನೆ, ಇದಕ್ಕಿಂತ ಹಿಂದೆ ಮುಖ್ಯ ಮಂತ್ರಿಗಳಿಂದಲೂ ಒಂದು ಕಾಗದವನ್ನು ಬರೆಸಿದ್ದೇನೆ, ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

ಕಲಬೆರಕೆ ಗೊಬ್ಬರದಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಬೆಳೆಗಳ ವಿಫಲತೆಯ ಬಗ್ಗೆ

ಶ್ರೀ ಬಿ. ಎಲ್. ಗೌಡ (ಮಾನ್ಯ ಕೃಷಿ ಸಚಿವರು).—ಈ ವಿಚಾರ ಕೃಷಿ ಇಲಾಖೆಯ ಗಮನಕ್ಕೆ ೨೯-೭-೧೯೬೩ರಿಂದೇ ಬಂತು. ವಿಷಯ ತಿಳಿದ ಕೂಡಲೇ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕೃಷಿ ಇಲಾಖೆಯ ಅಧಿಕಾರಿಗಳು ಜಿಲ್ಲೆಯ ಎಲ್ಲಾ ೧೬೭ ರಸ ಗೊಬ್ಬರ ಮಾರಾಟ ಕೇಂದ್ರಗಳನ್ನು ತನಿಖೆ ಮಾಡಿ ನಾಲ್ಕು ಟನ್ ಡೈ ಅಮೋನಿಯಂ ಫಾಸ್ಪೇಟನ್ನು ಶಹಾಪುರದಲ್ಲೂ ಹಾಗೂ ಐದು ಟನ್ ಡೈ ಅಮೋನಿಯಂ ಫಾಸ್ಪೇಟನ್ನು ಯಾದಗಿರಿಯಲ್ಲೂ ವಶಪಡಿಸಿಕೊಂಡು ನಿರ್ಭಂದದಲಿಟ್ಟು ಮುಂದಿನ ಕ್ರಮ ಕೈಗೊಂಡಿದ್ದಾರೆ. ಈಗಾಗಲೇ ಗೊಬ್ಬರ ನಿಯಂತ್ರಣ ಆಜ್ಞೆಯ ಮೇರೆಗೆ ಒಬ್ಬ ವ್ಯಾಪಾರಿಗಾರನ ಲೈಸನ್ಸ್‌ನ್ನು ತಡೆಹಿಡಿಯಲಾಗಿದೆ. ಈ ವಿಚಾರದಲ್ಲಿ ತನಿಕೆ ಇನ್ನೂ ಮುಂದುವರೆದಿದೆ.

ಈ ಗೊಬ್ಬರವನ್ನು ಉಪಯೋಗಿಸಿದ್ದರಿಂದ ರೈತರಿಗೆ ನಷ್ಟವಾಗಿದೆಯೋ ಅಥವಾ ಇಲ್ಲವೊ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಶ್ರೀ ಬಿ.ಆರ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯಲ್ಲಿ ಮುಂಗಾರು ಬೆಳೆಯನ್ನು ಬಿತ್ತುವಾಗ ರೈತರು ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಈ ಫ್ಯಾಕ್ಟನ ಡಿ.ಎ.ಪಿ. ಗೊಬ್ಬರವನ್ನು ಶ್ರೀ ಬಿಯಾನಿ ಎಂಬ ಒಬ್ಬ ಅಧಿಕೃತ ವ್ಯಾಪಾರಾಗಾರರಿಂದ ಸಾವಿರಾರು ಚೀಲಗಳಷ್ಟು ಖರೀದಿ ಮಾಡಿಕೊಂಡು ಹೋಗಿದ್ದಾರೆ. ಆ ರೈತರು ತಮ್ಮ ಭೂಮಿಗೆ ಈ ಗೊಬ್ಬರವನ್ನು ಹಾಕಿದ ನಂತರ ಯಾವ ಪ್ರಮಾಣದಲ್ಲಿ ಬೆಳೆ ಬರಬೇಕಾಗಿತ್ತೊ ಆ ಪ್ರಮಾಣದಲ್ಲಿ ಬೆಳೆ ಬಾರದೆ ಇವತ್ತು ಬಹಳಷ್ಟು